ಕರಾಸಕೈಅನಿನಿ



# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೋಂದಣಿ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು -560 010.

ಸಂಖ್ಯೆ. ಆಡಳಿತ/ವಿಭಾಗೀಯ-ವಿಲೀನ/2015/2120 ದಿನಾಂಕ 24.09.2016

## ಅಧಿಸೂಚನೆ

ವಿಷಯ: ನಿಗಮದ ವಿಭಾಗೀಯ ಕಛೇರಿಗಳನ್ನು ವಿಲೀನಗೊಳಿಸುವುದು ಮತ್ತು ಶಾಖಾ ಕಛೇರಿಗಳನ್ನು / ಕಚ್ಚಾ ಸಾಮಗ್ರಿ ಡಿಪೋಗಳನ್ನು ಮುಚ್ಚುವ ಬಗ್ಗೆ.

ಉಲ್ಲೇಖ:
1) ಅಧಿಸೂಚನೆ ಸಂಖ್ಯೆ. ಆಡಳಿತ/ಸ್ವನಿ/ಹುದ್ದೆಗಳ ರದ್ಧತಿ/2012/3962 ದಿನಾಂಕ: 25.11.2014.
2) ದಿನಾಂಕ 22.06.2016 ರಂದು ನಡೆದ 339ನೇ ಮಂಡಳಿ ಸಭೆಯ ನಡವಳಿ.
3) ಅಧಿಸೂಚನೆ ಸಂಖ್ಯೆ. ಆಡಳಿತ/ಸ್ವನಿ/ಹುದ್ದೆಗಳ ರದ್ಧತಿ/2012/2014 ದಿನಾಂಕ: 21.09.2016.

---

ನಿಗಮದ ಧ್ಯೇಯೋದ್ದೇಶಗಳಾದ ಕೈಗಾರಿಕಾ ವಸಾಹತು ಸ್ಥಾಪನೆ ಮತ್ತು ಅಭಿವೃದ್ಧಿ, ಕಚ್ಚಾ ಸಾಮಗ್ರಿ ವಿತರಣೆ ಹಾಗೂ ನಿರ್ಮಾಣ ಕಾಮಗಾರಿಗಳು, ಇತ್ಯಾದಿ ಕಾರ್ಯಚಟುವಟಿಕೆಗಳು ಇತ್ತೀಚಿನ ವರ್ಷಗಳಲ್ಲಿ ಅಲ್ಪಮಟ್ಟಿಗೆ ಕುಂಠಿತವಾಗಿರುತ್ತವೆ. ಆದ್ದರಿಂದ ಮತ್ತು ನಿಗಮದ ಆರ್ಥಿಕ ಹಿತದೃಷ್ಟಿಯಿಂದ ಪ್ರಸ್ತುತ ರಾಜ್ಯಾದ್ಯಂತ ಇರುವ ಕೆಲವು ವಿಭಾಗೀಯ ಕಛೇರಿಗಳನ್ನು ಒಟ್ಟುಗೂಡಿಸುವುದು (ವಿಲೀನ) ಹಾಗೂ ಕೆಲವು ಶಾಖಾ ಕಛೇರಿ / ಕಚ್ಚಾ ಸಾಮಗ್ರಿ ಡಿಪೋಗಳನ್ನು ಮುಚ್ಚುವುದು ಸೂಕ್ತವೆಂದು ತೀರ್ಮಾನಿಸಿ ಒಂದು ಪ್ರಸ್ತಾವನೆಯನ್ನು ದಿನಾಂಕ 22.06.2016 ರಂದು ನಡೆದ 339ನೇ ಮಂಡಳಿ ಸಭೆಯ ನಿರ್ಣಯಕ್ಕಾಗಿ ತರಲಾಗಿತ್ತು. ಸದರಿ ಪ್ರಸ್ತಾವನೆಯ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಮತ್ತು ಸುದೀರ್ಘವಾಗಿ ಚರ್ಚಿಸಿದ ನಂತರ ಪ್ರಸ್ತಾವನೆಯನ್ನು ಮಂಡಳಿಯು ಅನುಮೋದಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಕೂಡಲೇ ಜಾರಿಗೆ ಬರುವಂತೆ ವಿಭಾಗೀಯ ಕಛೇರಿಗಳನ್ನು ಒಟ್ಟುಗೂಡಿಸುವ (ವಿಲೀನ) ಬಗ್ಗೆ ಮತ್ತು ಕೆಲವು ಶಾಖಾ ಕಛೇರಿ / ಕಚ್ಚಾ ಸಾಮಗ್ರಿ ಡಿಪೋಗಳನ್ನು ಮುಚ್ಚುವ ಬಗ್ಗೆ ಕೆಳಕಂಡಂತೆ ಆದೇಶಿಸಲಾಗಿದೆ.

## ಆ ದೇ ಶ

**ವಿಭಾಗೀಯ ಕಛೇರಿಗಳನ್ನು ವಿಲೀನಗೊಳಿಸುವ ಬಗ್ಗೆ:**

- ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಪೀಣ್ಯ ವಿಭಾಗೀಯ ಕಛೇರಿಗಳನ್ನು ವಿಲೀನಗೊಳಿಸಿ ಬೆಂಗಳೂರು ವಿಭಾಗೀಯ ಕಛೇರಿಯನ್ನಾಗಿ ರಚಿಸಲಾಗಿದೆ. ಈ ಕಛೇರಿಯ ಕೇಂದ್ರ ಸ್ಥಾನ ಬೆಂಗಳೂರು ಆಗಿರುತ್ತದೆ. ಪೀಣ್ಯ ಕೈಗಾರಿಕಾ ವಸಾಹತುವಿನಲ್ಲಿ ಕಚ್ಚಾ ಸಾಮಗ್ರಿ ಡಿಪೋವನ್ನು ಮಾತ್ರ ಮುಂದುವರಿಸಲಾಗಿದೆ.

- ಶಿವಮೊಗ್ಗ ಮತ್ತು ಮಂಗಳೂರು ವಿಭಾಗೀಯ ಕಛೇರಿಗಳನ್ನು ವಿಲೀನಗೊಳಿಸಿ ಶಿವಮೊಗ್ಗ ವಿಭಾಗೀಯ ಕಛೇರಿಯನ್ನಾಗಿ ರಚಿಸಲಾಗಿದೆ. ಈ ಕಛೇರಿಯ ಕೇಂದ್ರ ಸ್ಥಾನ ಶಿವಮೊಗ್ಗ ಆಗಿರುತ್ತದೆ. ಮಂಗಳೂರು ಕೈಗಾರಿಕಾ ವಸಾಹತು ಕಛೇರಿಯನ್ನು ಶಾಖಾ ಕಛೇರಿಯನ್ನಾಗಿ ಮುಂದುವರಿಸಲಾಗಿದೆ.

- ತುಮಕೂರು ಮತ್ತು ದಾವಣಗೆರೆ ವಿಭಾಗೀಯ ಕಛೇರಿಗಳನ್ನು ವಿಲೀನಗೊಳಿಸಿ ತುಮಕೂರು ವಿಭಾಗೀಯ ಕಛೇರಿಯನ್ನಾಗಿ ರಚಿಸಲಾಗಿದೆ. ಈ ಕಛೇರಿಯ ಕೇಂದ್ರ ಸ್ಥಾನ ತುಮಕೂರು ಆಗಿರುತ್ತದೆ. ಹರಿಹರ ಕೈಗಾರಿಕಾ ವಸಾಹತು ಕಛೇರಿಯನ್ನು ಶಾಖಾ ಕಛೇರಿಯನ್ನಾಗಿ ಮುಂದುವರಿಸಲಾಗಿದೆ.

..2.

- ಕಲಬುರಗಿ ಮತ್ತು ಬಳ್ಳಾರಿ ವಿಭಾಗೀಯ ಕಛೇರಿಗಳನ್ನು ವಿಲೀನಗೊಳಿಸಿ ಕಲಬುರಗಿ ವಿಭಾಗೀಯ ಕಛೇರಿಯನ್ನಾಗಿ ರಚಿಸಲಾಗಿದೆ. ಈ ಕಛೇರಿಯ ಕೇಂದ್ರ ಸ್ಥಾನ ಕಲಬುರಗಿ ಆಗಿರುತ್ತದೆ. ಬಳ್ಳಾರಿ ಕೈಗಾರಿಕಾ ವಸಾಹತು ಕಛೇರಿಯನ್ನು ಶಾಖಾ ಕಛೇರಿಯನ್ನಾಗಿ ಮುಂದುವರಿಸಲಾಗಿದೆ.

**ಕೆಳಕಂಡ ಶಾಖಾ ಕಛೇರಿಗಳನ್ನು ಮುಚ್ಚಲಾಗಿದೆ:**

ಕೈಗಾರಿಕಾ ವಸಾಹತು, ವೀರಸಂದ್ರ, ಪೀಣ್ಯ 2ನೇ ಹಂತ, ಹಾಸನ, ಚಿಕ್ಕಮಗಳೂರು, ಕೋಲಾರ, ಮಂಡ್ಯ, ಹೊಸಪೇಟೆ, ರಾಯಚೂರು, ಬೀದರ್, ಸಿರಸಿ, ಗದಗ ಮತ್ತು ಬಾಗಲಕೋಟೆ ಶಾಖಾ ಕಛೇರಿಗಳು.

**ಕೆಳಕಂಡ ಕಚ್ಚಾ ಸಾಮಗ್ರಿ ಡಿಪೋಗಳನ್ನು ಮುಚ್ಚಲಾಗಿದೆ:**

ಕೈಗಾರಿಕಾ ವಸಾಹತು, ವೀರಸಂದ್ರ, ಹಾಸನ, ಚಿಕ್ಕಮಗಳೂರು, ಮಂಗಳೂರು, ಹೊಸಪೇಟೆ, ಸಿರಸಿ, ಗದಗ ಮತ್ತು ಬಾಗಲಕೋಟೆ ಡಿಪೋಗಳು.

ಮೇಲ್ಕಂಡಂತೆ ಕಛೇರಿಗಳ ವಿಲೀನ ಮತ್ತು ಮುಚ್ಚಿರುವ ಕಾರಣದಿಂದ ಕಛೇರಿಗಳ ಕೆಲಸಗಳನ್ನು ಆಯಾ ವಿಭಾಗೀಯ ಕಛೇರಿಗಳಿಂದ ನಿರ್ವಹಿಸುವ ಕ್ರಮಗಳನ್ನು ವಿಭಾಗೀಯ ಮುಖ್ಯಸ್ಥರು ಅನುಸರಿಸತಕ್ಕದ್ದು ಮತ್ತು ಕಛೇರಿಗಳನ್ನು ಮುಚ್ಚಿರುವ ಬಗ್ಗೆ ಮತ್ತು ಅಲ್ಲಿನ ಕೈಗಾರಿಕಾ ವಸಾಹತುಗಳ ಕೆಲಸಗಳನ್ನು ವಿಭಾಗೀಯ ಕಛೇರಿಗಳಿಂದಲೇ ನಿರ್ವಹಿಸಲಾಗುವುದೆಂದು ಸಂಬಂಧಪಟ್ಟ ಕೈಗಾರಿಕೋದ್ಯಮಿಗಳ ಸಂಘದವರಿಗೆ ಮಾಹಿತಿ ನೀಡಲು ಕ್ರಮ ಜರುಗಿಸುವುದು.

ಅಲ್ಲದೆ ಮುಚ್ಚುವ ಡಿಪೋಗಳಲ್ಲಿ ಕಚ್ಚಾ ಸಾಮಗ್ರಿ ದಾಸ್ತಾನು ಮತ್ತು ಅದಕ್ಕೆ ಪೂರಕವಾದ ಯಾವುದೇ ಸಲಕರಣೆ/ಸಾಮಗ್ರಿಗಳು ಇದ್ದಲ್ಲಿ, ಅವುಗಳನ್ನು ವಿಭಾಗೀಯ ಕಛೇರಿ ಡಿಪೋಗಳಿಗೆ ಸ್ಥಳಾಂತರಿಸಲು ವಿಭಾಗೀಯ ಮುಖ್ಯಸ್ಥರು ಕ್ರಮವಹಿಸುವುದು. ಅದೇ ರೀತಿ ಕೈಗಾರಿಕಾ ವಸಾಹತು ವಿಭಾಗಕ್ಕೆ ಸಂಬಂಧಿಸಿದಂತೆ ಕಡತಗಳು ಮತ್ತು ದಾಖಲೆಗಳನ್ನು ಹಾಗೂ ಗಣಕಯಂತ್ರಗಳನ್ನು ಸುರಕ್ಷಿತವಾಗಿ ಆಯಾ ವಿಭಾಗೀಯ ಕಛೇರಿಗಳಿಗೆ ಸ್ಥಳಾಂತರಿಸಲು ಸಹ ಕ್ರಮವಹಿಸುವುದು. ಸ್ಥಳಾಂತರಿಸುವ ಸಂದರ್ಭದಲ್ಲಿ ಗಣಕಯಂತ್ರಗಳಲ್ಲಿ ಯಾವುದೇ ದೋಷ ಉಂಟಾಗದಂತೆ ಎಚ್ಚರವಹಿಸುವುದು. ಇಲ್ಲವಾದಲ್ಲಿ ಸಂಬಂಧಪಟ್ಟ ವಿಭಾಗೀಯ ಮುಖ್ಯಸ್ಥರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು. ಮುಚ್ಚಲ್ಪಡುವ ಕಛೇರಿಗಳ ಬ್ಯಾಂಕ್ ಖಾತೆಗಳನ್ನು ಸಹ ಮುಕ್ತಾಯಗೊಳಿಸಿ ಅವುಗಳಲ್ಲಿನ ಮೊತ್ತವನ್ನು ವಿಭಾಗೀಯ ಕಛೇರಿಯ ಸಂಬಂಧಪಟ್ಟ ಖಾತೆಗಳಿಗೆ ವರ್ಗಾಯಿಸುವುದು. ಇದಕ್ಕೆ ಅಗತ್ಯವಿದ್ದಲ್ಲಿ ಹಣಕಾಸು ವಿಭಾಗದ ಅನುಮೋದನೆ / ಅನುಮತಿ ಪಡೆಯುವುದು. ಈ ಎಲ್ಲಾ ಕೆಲಸಗಳಿಗೆ ಸಂಬಂಧಿಸಿದಂತೆ ಶಾಖಾ ಕಛೇರಿಗಳ / ವಿಭಾಗೀಯ ಕಛೇರಿಗಳ ಮುಖ್ಯಸ್ಥರುಗಳಿಗೆ ಆಯಾ ವಲಯ ಮುಖ್ಯಸ್ಥರುಗಳು ಸಹಕರಿಸತಕ್ಕದ್ದು. ಈ ಎಲ್ಲ ಕ್ರಮಗಳನ್ನು 30 ದಿನಗಳೊಳಗೆ ಪೂರೈಸಿ ಕೇಂದ್ರ ಕಛೇರಿಗೆ ತಪ್ಪದೇ ವರದಿ ಸಲ್ಲಿಸಲು ವಲಯ / ವಿಭಾಗೀಯ ಮುಖ್ಯಸ್ಥರುಗಳಿಗೆ ಸೂಚಿಸಲಾಗಿದೆ.

ಉಲ್ಲೇಖ (1) ರ ಅಧಿಸೂಚನೆ ಪ್ರಕಾರ ವಿವಿಧ ವೃಂದಗಳಲ್ಲಿ ಮಂಜೂರಾದ ಹುದ್ದೆಗಳನ್ನು ಕಛೇರಿವಾರು ಹಂಚಿಕೆ ಮಾಡಲಾಗಿದ್ದು, ಮೇಲ್ಕಂಡಂತೆ ವಿಭಾಗೀಯ ಕಛೇರಿಗಳನ್ನು ವಿಲೀನಗೊಳಿಸಿರುವುದು ಮತ್ತು ಕೆಲವು ಶಾಖಾ ಕಛೇರಿ / ಕಚ್ಚಾ ಸಾಮಗ್ರಿ ಡಿಪೋಗಳನ್ನು ಮುಚ್ಚಿರುವುದರಿಂದ ಮಂಜೂರಾದ ಹುದ್ದೆಗಳನ್ನು ಅನುಬಂಧದಲ್ಲಿ ತೋರಿಸಿರುವಂತೆ ಕಛೇರಿವಾರು ಹಂಚಿಕೆ/ ಮರು ಹೊಂದಾಣಿಕೆ ಮಾಡಿ ಅಧಿಸೂಚಿಸಿದೆ.

ಸಹಿ/-
**ವ್ಯವಸ್ಥಾಪಕ ನಿರ್ದೇಶಕರು**

ಅವರಿಗೆ,

ಪ್ರಧಾನ ವ್ಯವಸ್ಥಾಪಕರು (ಆಡಳಿತ & ಭೂಸ್ವಾಧೀನ)/ (ಕೈವ/ಹಣಕಾಸು) /(ವಾಣಿಜ್ಯ), ಕರಾಸಕೈಅನಿನಿ, ಬೆಂಗಳೂರು.
2. ಮುಖ್ಯ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು.
3. ಎಲ್ಲಾ ಉಪ ಪ್ರಧಾನ ವ್ಯವಸ್ಥಾಪಕರುಗಳು, ಕರಾಸಕೈಅನಿನಿ.
4. ಎಲ್ಲಾ ಸಹಾಯಕ ಪ್ರಧಾನ ವ್ಯವಸ್ಥಾಪಕರುಗಳು, ಕರಾಸಕೈಅನಿನಿ.
5. ಎಲ್ಲಾ ಶಾಖಾ ಕಛೇರಿಗಳ ಮುಖ್ಯಸ್ಥರುಗಳು, ಕರಾಸಕೈಅನಿನಿ.
6. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವಾಲೆ), ಕರಾಸಕೈಅನಿನಿ, ಬೆಂಗಳೂರು.
7. ನಿಗಮದ ಎಲ್ಲಾ ಇಲಾಖಾ/ವಿಭಾಗ/ಶಾಖಾ ಮುಖ್ಯಸ್ಥರಿಗೆ ಮಾಹಿತಿಗಾಗಿ ಮತ್ತು ತಮ್ಮ ಅಧೀನದ ಎಲ್ಲಾ ಅಧಿಕಾರಿ / ನೌಕರರ ಗಮನಕ್ಕೆ ತರುವುದಕ್ಕಾಗಿ. 8. ಸಂಬಂಧಪಟ್ಟ ಕಡತ.